ಅಧ್ಯಕ್ಷರು:– ಮಾನ್ಯ ಸದಸ್ಯರುಗಳಿಗೆ ನಾನು ಹೇಳುವುದೇನೆಂದರೆ ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಬೇಕಾದ ವಿಷಯಗಳ ಬಗ್ಗೆ ನೀವು ಮೊದಲೇ ನಮ್ಮ ಸಚಿವಾಲಯದ ಕಛೇರಿಗೆ ಕಳುಹಿಸಿ ಕೊಟ್ಟರೆ ನಾವೂ ಕೂಡ ಸಂಬಂಧಪಟ್ಟ ಸಚಿವರಿಗೆ ಈ ಬಗ್ಗೆ ತಿಳಿಸುತ್ತೇವೆ. ಆಗ ಸಚಿವರಿಗೂ ಉತ್ತರ ಕೊಡುವುದಕ್ಕೆ ಅವಕಾಶವಾಗುತ್ತದೆ. ಆ ರೀತಿ ನೀವು ಮೊದಲೇ ನಮ್ಮ ಕಛೇರಿಗೆ ಕೊಡದೇ ಇಲ್ಲಿ ಪ್ರಸ್ತಾಪಿಸಿದರೆ ಸುಮ್ಮನೆ ನೀವು ಹೇಳಿದಂತಾಗುತ್ತದೆ, ನಾವು ಕೇಳಿದಂತಾಗುತ್ತದೆ. ಆದಕಾರಣ ಮೊದಲೇ ನಮ್ಮ ಕಛೇರಿಗೆ ಈ ಬಗ್ಗೆ ತಿಳಿಸಿದರೆ ನಿಮಗೂ ಒಳ್ಳೆಯದು. ಅದನ್ನು ಇನ್ನು ಮುಂದೆ ಮಾಡಿ. ಈಗ ವಿತ್ತೀಯ ಕಾರ್ಯಕಲಾಪಕ್ಕೆ ಹೋಗೋಣ.

ಶ್ರೀ ಹೆಚ್. ಆಂಜನೇಯ:– ಆಯಿತು ಸಾರ್. ಸೋಮವಾರ ಪ್ರಸ್ತಾಪಿಸಲು ಮೊದಲೇ ತಮ್ಮ ಕಛೇರಿಗೆ ನನ್ನ ಪತ್ರ ಕೊಡುತ್ತೇನೆ.

(ಊ) ವಿಷಯ:– ಶೂನ್ಯವೇಳೆಯಲ್ಲಿ ವಿಷಯಗಳನ್ನು ಪ್ರಸ್ತಾಪಿಸುವ ಬಗ್ಗೆ.

ಶ್ರೀ ಕೆ.ಆರ್. ರಮೇಶ್‌ಕುಮಾರ್:– ಮಾನ್ಯ ಅಧ್ಯಕ್ಷರೆ, ನಾನೊಂದು ಸಲಹೆ ಕೊಡ ಬಯಸುತ್ತೇನೆ. ಈ ಶೂನ್ಯವೇಳೆಗೆ ಸಂಬಂಧಪಟ್ಟಂತೆ ಈಗ ಸಚಿವಾಲಯದ ಕಾರ್ಯಾಲಯದವರು ತಮಗೆ ಸಹಾಯ ಮಾಡಿದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ. ಆದರೆ ನಾವು ಹಿಂದೆ ಏನು ಮಾಡಿದ್ದೇವೆಂದರೆ ಸಭಾಧ್ಯಕ್ಷರು ಅರ್ಧ ಗಂಟೆ ಮೊದಲೇ ಬಂದು ತಮ್ಮ ಛೇಂಬರ್‌ನಲ್ಲಿ ಕುಳಿತಿರುತ್ತಾರೆ. ಯಾವ ಯಾವ ಸದಸ್ಯರು ಶೂನ್ಯವೇಳೆಯಲ್ಲಿ ಪ್ರಸ್ತಾಪ ಮಾಡಲು ಅವಕಾಶ ಕೋರಿ ಬರುತ್ತಾರೆ ಅವರೆಲ್ಲರೂ ಸಭಾಧ್ಯಕ್ಷರನ್ನು ಭೇಟಿಯಾಗುತ್ತಾರೆ. ಸಭಾಧ್ಯಕ್ಷರಾದ ತಾವು ಎಂಟೋ, ಹತ್ತೋ ಪ್ರಾಮುಖ್ಯವಾದ ವಿಚಾರಗಳ ಬಗ್ಗೆ ಲಿಸ್ಟ್ ಮಾಡಿಕೊಂಡುಬಿಟ್ಟು ಉಳಿದ ವಿಚಾರಗಳ ಬಗ್ಗೆ ಮಾರನೆಯ ದಿವಸಕ್ಕೋ ಅಥವಾ ಬೇರೆ ನಿಮಯದಡಿಯಲ್ಲಿ ಚರ್ಚೆಗೆ ಅವಕಾಶ ಕೊಡುವಂಥ ವ್ಯವಸ್ಥೆಯನ್ನು ಮಾಡಿಕೊಂಡರೆ ಅನುಕೂಲವಾಗುತ್ತದೆ. ಕಾರ್ಯಾಲಯದವರು ಈ ಬಗ್ಗೆ ತಮಗೆ ಸಹಾಯ ಮಾಡಬೇಕಾಗಿತ್ತು. ನಾನು ಹೇಳಿದ ರೀತಿಯಲ್ಲಿ ಮಾಡಿಕೊಂಡರೆ ಈ ರೀತಿಯ ಗದ್ದಲ ಇರುವುದಿಲ್ಲ. ಏಕೆಂದರೆ ಮೆಂಬರ್ಸ್‌ಗಳಿಗೂ ಗೊತ್ತಿರುತ್ತದೆ. ಒಂದು ವೇಳೆ ತಾವು ಮಾಡಿಕೊಂಡ ಲಿಸ್ಟ್‌ನಲ್ಲಿ ಇಲ್ಲದಿದ್ದವರು ಎದ್ದುನಿಂತು ಮಾತನಾಡಿದರೆ ತಾವು ಹೇಳಬಹುದು, ತಮ್ಮ ವಿಚಾರ ನಾಳೆ ಬರುತ್ತದೆ, ನಾಳೆ ಮಾತನಾಡುವಿರಂತೆ ಎಂದು ಸದಸ್ಯರಿಗೆ ಹೇಳಬಹುದು. I think that should help. The secretariat people should help the Hon'ble Speaker.

ಅಧ್ಯಕ್ಷರು:– ಆಯಿತು. ಈಗ ವಿತ್ತೀಯ ಕಾರ್ಯಕಲಾಪಕ್ಕೆ ಹೋಗೋಣ. ಮೊದಲು ಜೆ.ಸಿ. ಮಾಧುಸ್ವಾಮಿಯವರೆ, ದಯಮಾಡಿ ತಾವು ಮಾತನಾಡಿ.

(ಋ) ವಿಷಯ:– ವಿಷಯ ಪ್ರಸ್ತಾಪಿಸಲು ಅವಕಾಶ ನೀಡುವ ಬಗ್ಗೆ.

ಶ್ರೀ ಕೆ.ಎಂ. ಕೃಷ್ಣಮೂರ್ತಿ:– ಮಾನ್ಯ ಸಭಾಧ್ಯಕ್ಷರೆ, ನಾನು ಒಂದು ವಿಚಾರದ ಬಗ್ಗೆ ಮಾತನಾಡಬೇಕಿದೆ. ಅವಕಾಶ ಕೊಡಿ.

ಅಧ್ಯಕ್ಷರು:– ಅನೇಕ ಸದಸ್ಯರು ಇನ್ನೂ ಅನೇಕ ವಿಚಾರಗಳ ಬಗ್ಗೆ ಮಾತನಾಡಲು ಅವಕಾಶ ಕೇಳಿದ್ದಾರೆ. ನಾನು ಬೇರೆ ದಿವಸ ಅವಕಾಶ ಮಾಡಿಕೊಡುತ್ತೇನೆ. ಏಕೆಂದರೆ ಇವೊತ್ತು ಇನ್ನೂ ಖಾಸಗಿ ಸದಸ್ಯರುಗಳ ವಿಧೇಯಕದ ಬಗ್ಗೆ ಕೂಡ ಅಜೆಂಡಾದಲ್ಲಿದೆ. ಈ ಕಾರ್ಯಕಲಾಪವನ್ನೆಲ್ಲಾ ಇನ್ನೂ ನಡೆಸಬೇಕಾಗಿದೆಯಾದ ಕಾರಣ ತಾವು ದಯಮಾಡಿ ಕುಳಿತುಕೊಳ್ಳಿ. ಇನ್ನೊಂದು ದಿವಸ ತಮಗೆ ಅವಕಾಶ ಕೊಡುತ್ತೇನೆ. ಈಗ ಕುಳಿತುಕೊಳ್ಳಿ.

ಶ್ರೀ ಕೆ.ಎಂ.ಕೃಷ್ಣಮೂರ್ತಿ:– ನಾನು ನನಗೆ ಅವಕಾಶ ಕೊಡಿ ಎಂದು ಕೇಳುತ್ತಲೇ ಬಂದಿದ್ದೇನೆಯಾದರೂ ನನಗೆ ಅವಕಾಶವನ್ನೇ ಕೊಡುತ್ತಿಲ್ಲ. ಆಡಳಿತ ಪಕ್ಷದವರು ಮಾತನಾಡಬಾರದು ಎಂದು ನಿಯಮವಿದೆಯೇ?

ಅಧ್ಯಕ್ಷರು:– ನಿಮ್ಮ ಪ್ರಶ್ನೆ ಲ್ಯಾಪ್ಸ್ ಆಗಿಬಿಟ್ಟಿದೆ. ಬಜೆಟ್ ಮೇಲೆ ಮಾತನಾಡುವಿರಂತೆ.

ಶ್ರೀ ಕೆ.ಎಂ.ಕೃಷ್ಣಮೂರ್ತಿ:– ಸಭಾಧ್ಯಕ್ಷರಾದ ತಾವು ಸಭೆಯನ್ನು ಕಂಟ್ರೋಲ್ ಮಾಡಬೇಕು.

ಅಧ್ಯಕ್ಷರು:– ಏನ್ ನೀವು ನನಗೆ ಕಂಟ್ರೋಲ್ ಮಾಡಬೇಕು ಎಂದು ಈ ರೀತಿ ಹೇಳುತ್ತಿದ್ದೀರಿ. ಸದಸ್ಯರೆಲ್ಲರೂ ಸಹಕಾರ ಕೊಡಬೇಕೆಂದು ನಾನು ಪದೇ ಪದೇ ವಿನಂತಿ ಮಾಡಿಕೊಂಡರೂ ಎಲ್ಲರೂ ಒಮ್ಮೆಲೆ ಎದ್ದುನಿಂತು ಮಾತನಾಡಲು ಹೋದರೆ ಏನ್ ಕಂಟ್ರೋಲ್ ಮಾಡುವುದು? ಈ ರೀತಿ ಸದಸ್ಯರುಗಳೇ ಸಹಕಾರ ಕೊಡುತ್ತಿಲ್ಲದಿರುವಾಗ ನಾನೇನು ಕಂಟ್ರೋಲ್ ಮಾಡುವುದು. ಏನು ಮಾಡುವುದು ಹೇಳಿ ಸ್ವಾಮಿ.

ಶ್ರೀ ಕೆ.ಎಂ. ಕೃಷ್ಣಮೂರ್ತಿ:– ತಾವು ಸದಸ್ಯರಿಗೆ ಮಾತನಾಡುವುದನ್ನು ಬೇಗ ಮುಗಿಸಿ ಎಂದು ಹೇಳಿ. ನಾನು ಈಗಾಗಲೇ ಮೂರು ಸಾರಿ ಪ್ರಶ್ನೆ ಹಾಕಿದ್ದೇನೆ. ಮೂರು ಬಾರಿ ಪ್ರಶ್ನೆ ಹಾಕಿದರೂ ಅದಕ್ಕೆ ತಮ್ಮಿಂದ ಉತ್ತರ ಬಂದಿಲ್ಲ. ಮಂತ್ರಿಗಳಿಂದಲೂ ಉತ್ತರ ಬಂದಿಲ್ಲ.

ಅಧ್ಯಕ್ಷರು:– ಕೃಷ್ಣಮೂರ್ತಿಯವರೆ, ತಾವು ನಿಯಮ 69 ರಡಿಯಲ್ಲಿ ಚರ್ಚೆಗೆ ಅವಕಾಶ ಕೋರಿ ಪತ್ರ ಕಳುಹಿಸಿಕೊಡಿ. ಚರ್ಚೆಗೆ ನಾನು ಅವಕಾಶ ಮಾಡಿಕೊಡುತ್ತೇನೆ.

ಶ್ರೀ ಕೆ.ಎಂ. ಕೃಷ್ಣಮೂರ್ತಿ:– ಪ್ರಶ್ನೋತ್ತರ ಒಂದು ಗಂಟೆಯಲ್ಲಿ ಮುಗಿಸಬೇಕು. ಆದರೆ ಹೆಚ್ಚು ಕಾಲ ತೆಗೆದುಕೊಂಡಾಗ ನಮಗೆ ಅವಕಾಶ ಸಿಗುವುದಿಲ್ಲ. ಆದಕಾರಣ ನನಗೆ ಚರ್ಚೆಗೆ ಬೇರೆ ನಿಯಮದಡಿ ಅವಕಾಶ ಮಾಡಿಕೊಡಿ.

ಅಧ್ಯಕ್ಷರು:– ಆಯಿತು. ತಾವು ಬೇರೆ ನಿಯಮದಡಿಯಲ್ಲಿ ಚರ್ಚೆಗೆ ಅವಕಾಶ ಕೋರಿ ಪತ್ರ ಕಳುಹಿಸಿಕೊಡಿ. ನಾನು ಅರ್ಧ ಗಂಟೆ ಕಾಲಾವಧಿಯಲ್ಲಿ ತೆಗೆದುಕೊಳ್ಳಲು ಚರ್ಚೆಗೆ ಅವಕಾಶ ಕೊಡುತ್ತೇನೆ. ತಾವು ಈಗ ಕುಳಿತುಕೊಳ್ಳಿ.

ಶ್ರೀ ಓಲೇಕಾರ್ ನೆಹರು ಚನ್ನಬಸಪ್ಪ(ಬ್ಯಾಡಗಿ):– ಮಾನ್ಯ ಅಧ್ಯಕ್ಷರೆ, ಒಂದು ಕೊಲೆ ಪ್ರಕರಣದಲ್ಲಿ ಖೊಟ್ಟಿ ಸರ್ಟಿಫಿಕೇಟ್ ಅಧಿಕಾರಿಗಳು ಕೊಟ್ಟಿರುವುದನ್ನು ಸರ್ಕಾರದ ಗಮನಕ್ಕೆ ತರಬೇಕಾಗಿದೆ. ಆದಕಾರಣ ನನಗೆ ತಾವು ದಯವಿಟ್ಟು ಅವಕಾಶ ಮಾಡಿಕೊಡಿ.

ಅಧ್ಯಕ್ಷರು:– ಆಯಿತು. ತಾವು ಮಾತನಾಡಿ.

ಖೂ) ವಿಷಯ:– ಬ್ಯಾಡಗಿ ತಾಲ್ಲೂಕಿನ ಕಾಟೇನಹಳ್ಳಿಯಲ್ಲಿ ನಡೆದ ಕೊಲೆ ಪ್ರಕರಣದಲ್ಲಿ ಖೊಟ್ಟಿ ಸರ್ಟಿಫಿಕೇಟ್ ನೀಡಿರುವ ಬಗ್ಗೆ.

ಶ್ರೀ ಓಲೇಕಾರ್ ನೆಹರು ಚನ್ನಬಸಪ್ಪ(ಬ್ಯಾಡಗಿ):– ಮಾನ್ಯ ಅಧ್ಯಕ್ಷರೆ, 2003ರಲ್ಲಿ ಬ್ಯಾಡಗಿ ತಾಲ್ಲೂಕಿನ ಕಾಟೇನಹಳ್ಳಿ ಗ್ರಾಮದಲ್ಲಿ ಬೆಳಿಗ್ಗೆ ಹತ್ತು ಗಂಟೆಗೆ ಒಂದು ಕೊಲೆ ಪ್ರಕರಣ ನಡೆದಿದೆ. ಅದರಲ್ಲೂ ಪರಿಶಿಷ್ಟ ಜಾತಿಯ ಹೆಣ್ಣು ಮಗಳ ಮೇಲೆ ಕೆಲವು ಕಿಡಿಗೇಡಿಗಳು ದೌರ್ಜನ್ಯ ಮಾಡಿ ಕೊಲೆಯನ್ನು ಮಾಡುವುದಕ್ಕೆ ಪ್ರಯತ್ನವನ್ನು ಪಟ್ಟರು. ಆ ಮಹಿಳೆಯನ್ನು ಹರಿತವಾದ ಕೊಡಲಿಯಿಂದ ಹೊಡೆದು ಅವಳನ್ನು ಕೆರೆಗೆ ಉರುಳಿಸಿದ್ದಂಥ ಘಟನೆ ಪತ್ರಿಕೆಯಲ್ಲೂ ಕೂಡ ಬಂದಿದೆ. ಅಲ್ಲಿ ಸೆಕ್ಷನ್ 307 ರ ಪ್ರಕಾರ ಕೇಸ್ ಕೂಡ ದಾಖಲಾಗಿದೆ. ಆ ಸಂದರ್ಭದಲ್ಲಿ ಆ ಮಹಿಳೆ ಸುಮಾರು ಮೂರು